## ಕರ್ನಾಟಕ ವಿಧಾನ ಪರಿಷತ್ತು

### ಶ್ರೀ ಮರಿತಿಬ್ಬೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ನಿಯಮ-72 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರ ಉತ್ತರ

ವಿಷಯ:-

ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಆನೇಕಲ್, ಸರ್ಜಾಪುರ ಈ ಎರಡು ಪ್ರದೇಶಗಳಲ್ಲಿ ವಾಸವಾಗಿರುವುದಾಗಿ ನಕಲಿ ವಿಳಾಸ ನೀಡಿ, 2015ನೇ ಸಾಲಿನಿಂದ ಭಾರತ್-03 ವಾಯು ಮಾಲಿನ್ಯ ನಾಲ್ಕು ಚಕ್ರದ ಸಾವಿರಾರು ವಾಹನಗಳನ್ನು ಕಾನೂನು ಬಾಹಿರವಾಗಿ ಅಧಿಕಾರಿಗಳು ಶಾಮೀಲಾಗಿ ನೊಂದಣಿ ಮಾಡಿ, ಅತೀವ ವಾಯು ಮಾಲಿನ್ಯ ಉಂಟು ಮಾಡಿರುವುದಲ್ಲದೆ, ಇಲಾಖೆಯ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವನ್ನು ಉಂಟು ಮಾಡಿರುವ ಗಂಭೀರ ಸಮಸ್ಯೆ ಕುರಿತು ನಿಯಮ 330ರಡಿ ಪ್ರಸ್ತಾಪನೆಗೆ ದಿನಾಂಕ:11-10-2019ರಂದು ಕರ್ನಾಟಕ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಸಾರಿಗೆ ಇಲಾಖಾ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ಸದನಕ್ಕೆ ತಪ್ಪು ಉತ್ತರವನ್ನು ನೀಡಿರುವ ಬಗ್ಗೆ ಸಂಬಂಧಪಟ್ಟ ಇಲಾಖಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:-

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರ ನಿಯಮ-330 ರಡಿಯಲ್ಲಿನ ಸೂಚನೆಗೆ ದಿನಾಂಕ:11-10-2019 ರಂದು ಈಗಾಗಲೇ ನೀಡಿರುವ ಉತ್ತರದಂತೆ, ಬೆಂಗಳೂರು ನಗರ ಪ್ರದೇಶಗಳಲ್ಲಿ ಬಿಎಸ್-4 ಮಾದರಿಯ ವಾಹನಗಳನ್ನು ಕೇಂದ್ರ ಮೋಟಾರು ವಾಹನ ನಿಯಮಗಳು, 1989ರ ನಿಯಮ 4 ರಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ನೊಂದಣಿ ಪ್ರಾಧಿಕಾರದವರು ನೊಂದಣಿ ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: 84(ಇ), ದಿನಾಂಕ: 09-02-2009ರಲ್ಲಿ ಅನುಕ್ರಮ ಸಂಖ್ಯೆ: 2(ಸಿ)ರಲ್ಲಿ ಇರುವ ಅವಕಾಶದಂತೆ, ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್ ಸಿಟಿ ಕಛೇರಿಯ ವ್ಯಾಪ್ತಿಗೆ ಬರುವ ಬೆಂಗಳೂರು ನಗರ ಜಿಲ್ಲೆಯ ಮಹಾನಗರ ಪ್ರದೇಶ (BBMP) ವ್ಯಾಪ್ತಿಯಲ್ಲಿ ಬಿಎಸ್-4 ಮಾದರಿಯ ವಾಹನಗಳನ್ನು ನೋಂದಣಿ ಮಾಡಲಾಗುತ್ತಿತ್ತು. ಅಲ್ಲದೆ, ಬಿಎಸ್-3 ಮಾದರಿಯ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಗೆ, ಬೆಂಗಳೂರು ನಗರ (BBMP) ವ್ಯಾಪ್ತಿಗೆ ಒಳಪಡದ ಆನೇಕಲ್ ಮತ್ತು ಸರ್ಜಾಪುರ ಪ್ರದೇಶಗಳಲ್ಲಿ 2015ನೇ ಸಾಲಿನಿಂದ ದಿನಾಂಕ:01-04-2017 ರವರೆಗೆ ಬಿಎಸ್-3 ಮಾದರಿಯ ವಾಹನಗಳನ್ನು ಸಹ ಕೇಂದ್ರ ಮೋಟಾರು ವಾಹನ ನಿಯಮಗಳು, 1989ರ ನಿಯಮ-4 ರಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ನೊಂದಣಿ ಪ್ರಾಧಿಕಾರದವರು ನೊಂದಣಿ ಮಾಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್ ಸಿಟಿ ಕಛೇರಿಯ ವ್ಯಾಪ್ತಿಗೆ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ನಗರಕ್ಕೆ ಒಳಪಡುವ ಹಲವು ಪ್ರದೇಶಗಳು (BBMP) ಮತ್ತು ಬೆಂಗಳೂರು ನಗರ (BBMP) ಗೆ ಒಳಪಡದೆ ಇರುವ ಪ್ರದೇಶಗಳು ಕೂಡ ಒಳಪಟ್ಟಿರುತ್ತವೆ. ಆದುದರಿಂದ, ದಿನಾಂಕ:11-10-2019ರಂದು ನಿಯಮ-330ರ ಸೂಚನೆಗೆ ಈಗಾಗಲೇ ನೀಡಿರುವ ಉತ್ತರವು ಸರಿ ಇದ್ದು, ಯಾವುದೇ ತಪ್ಪು ಮಾಹಿತಿಯಿಂದ ಕೂಡಿರುವುದಿಲ್ಲ.

ಟಿಡಿ 05 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು